ಕರ್ನಾಟಕ ಸರ್ಕಾರ
(ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: ಬಿಟಿಇ/08/ಇಎಪಿ/2021.

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001,
ದಿನಾಂಕ: 18.09.2021.

## ಜ್ಞಾಪನ

ವಿಷಯ: COVID-19 Pandemic ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಮತ್ತು ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಡೆಸುವ 2021ರ ಅಕ್ಟೋಬರ್/ನವೆಂಬರ ಸೆಮಿಸ್ಟರ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳುವ ಬಗ್ಗೆ.

ಉಲ್ಲೇಖ:
1 ಈ ಕಛೇರಿ ನೋಟಿಫಿಕೇಷನ್ ಸಂಖ್ಯೆ:ಬಿಟಿಇ/24/ಇಎಪಿ/97, ದಿ: 31-12-97.
2 ಸರ್ಕಾರಿ ಆದೇಶ ಸಂ:ಇಡಿ/1/ಟಿಪಿಇ 98, ದಿನಾಂಕ: 11-08-2000
3 ಸರ್ಕಾರಿ ಆದೇಶ ಸಂ:ಇಡಿ/257/ಟಿಪಿಇ/2003, ದಿ: 31-3-2004
4 ಸರ್ಕಾರಿ ಆದೇಶ ಸಂ:ಇಡಿ/11/ಟಿಪಿಇ/2007 ಬೆಂಗಳೂರು, ದಿ: 3-12-2007
5 ಸರ್ಕಾರಿ ಆದೇಶ ಸಂ:ಇಡಿ/215/ಟಿಪಿಇ/2010, ದಿ: 2-8-2010
6 ಸರ್ಕಾರಿ ಆದೇಶ ಸಂ:ಸಕಇ/357/ಬಿಎಂಎಸ್/2012, ಬೆಂಗಳೂರು, ದಿ: 7-11-2012
7 ಸರ್ಕಾರಿ ಆದೇಶ ಸಂಖ್ಯೆ:ಇಡಿ/222/ಟಿಪಿಇ/2012, ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್ 2012.
8 ಸರ್ಕಾರಿ ಆದೇಶ ಸಂಖ್ಯೆ:ಇಡಿ 334 ಯುಎನ್ಇ 2020. ಬೆಂಗಳೂರು, ದಿನಾಂಕ: ದಿ: 9-11-2020.
9 ಸರ್ಕಾರಿ ಪತ್ರದ ಸಂಖ್ಯೆ: ಇಡಿ 38 ಟಿಪಿಇ 2021. ಬೆಂಗಳೂರು, ದಿನಾಂಕ: ದಿ: 17-04-2021.
10 ಸರ್ಕಾರಿ ಪತ್ರದ ಸಂಖ್ಯೆ: ಇಡಿ 63 ಡಿಟಿಇ 2021. ಬೆಂಗಳೂರು, ದಿನಾಂಕ: ದಿ: 17-04-2021.

-0-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, COVID-19 Pandemic ಹಿನ್ನೆಲೆಯಲ್ಲಿ 2020-21ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸುವ ಸಲುವಾಗಿ University Garnts Commission ನೀಡಿರುವ ಮಾರ್ಗಸೂಚಿಗಳಂತೆ COVID-19 ಸೋಂಕು ಹರಡದಂತೆ ಮುನ್ನೆಚ್ಚರಿಕೆ ಕ್ರಮವಹಿಸಲು ಸರ್ಕಾರವು ಉಲ್ಲೇಖ(8)ರ ಆದೇಶದಲ್ಲಿ ಪ್ರಮಾಣಿತ ಕಾರ್ಯಚರಣಾ ವಿಧಾನ (Standard Operating Procedure-SOP) ಮಾರ್ಗಸೂಚಿಗಳನ್ನು ನೀಡಿರುತ್ತದೆ. ಪ್ರಯುಕ್ತ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ತಾಂತ್ರಿಕ ಪರೀಕ್ಷಾ ಮಂಡಳಿಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಮಾಣಿತ ಕಾರ್ಯಚರಣಾ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಡಿಪ್ಲೋಮಾ ತರಗತಿಗಳನ್ನು OFFLINE/ONLINE ಮುಂದುವರೆಸಲು ಆದೇಶಿಸಲಾಗಿದೆ.

ಮುಂದುವರೆದು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ತಾಂತ್ರಿಕ ಪರೀಕ್ಷಾ ಮಂಡಳಿಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ 2020-21ನೇ ಶೈಕ್ಷಣಿಕ ಸಾಲಿನ ಸಮ ಸೆಮಿಸ್ಟರ್‌ಗಳ ಹಾಗೂ ಬ್ಯಾಕ್‌ಲಾಗ್ ವಿಷಯಗಳ (2021ರ ಅಕ್ಟೋಬರ್/ನವೆಂಬರ) ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ (Technical / Non-Technical Student) ಶುಲ್ಕ ಪಾವತಿಸುವ ಬಗ್ಗೆ ಸಂಪೂರ್ಣ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

ಅಂತಹ ವಿದ್ಯಾರ್ಥಿಗಳು ತಮ್ಮ ಸಂಸ್ಥೆಯಲ್ಲಿ ನಿಗಧಿತ ದಿನಾಂಕದ ಒಳಗೆ ನಿಗಧಿತ ಶುಲ್ಕ ಪಾವತಿಸಲು ಮತ್ತು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿದೆ.

{ಪು.ತಿ.ನೋ}

1. ಸಂಸ್ಥೆಯಲ್ಲಿ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ವಿವರ:

ದಿನಾಂಕ: **20-09-2021** ರಿಂದ 13-10-2021 ರವರೆಗೆ(ಎರಡೂ ದಿನಗಳು ಸೇರಿ) ದಂಡ ರಹಿತವಾಗಿ.

**ಸೂಚನೆ(i)** ಉಲ್ಲೇಖ(4)ರ ಸರ್ಕಾರಿ ಆದೇಶದ ಪ್ರಕಾರ ಸಂಸ್ಥೆಯ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡಂತೆ ಪಡೆಯತಕ್ಕದ್ದು.

| | | |
|---|---|---|
| ಅ) | ಪ್ರತಿ ಸೆಮಿಸ್ಟರ್‌ನ ಪೂರ್ತಿ ಪರೀಕ್ಷೆಗೆ | ರೂ.300-00 |
| ಆ) | ಪ್ರತಿ ಸೆಮಿಸ್ಟರ್‌ನ 1 ವಿಷಯಕ್ಕೆ | ರೂ.200-00 |
| ಇ) | ಪ್ರತಿ ಸೆಮಿಸ್ಟರ್‌ನ 2 ವಿಷಯಕ್ಕೆ | ರೂ.200-00 |
| ಈ) | ಪ್ರತಿ ಸೆಮಿಸ್ಟರ್‌ನ 3 ವಿಷಯಕ್ಕೆ | ರೂ.300-00 |

**ಸೂಚನೆ(ii) ಪರೀಕ್ಷಾ ಶುಲ್ಕದೊಂದಿಗೆ ಪ್ರತಿ ಪರೀಕ್ಷೆಯ ಅಂಕಪಟ್ಟಿಗಾಗಿ ರೂ.50-00 ಪಡೆಯುವಂತೆ ತಿಳಿಸಲಾಗಿದೆ.**

**ಸೂಚನೆ(iii)**

(ಎ) **ತಾಂತ್ರಿಕ ಪರೀಕ್ಷಾ ಮಂಡಳಿಯ 175ನೇ ಕೇಂದ್ರ ಸಭೆಯ ನಿರ್ಣಯದಂತೆ C-03 ಪಠ್ಯಕ್ರಮದ I,II,III,IV, V & VI ನೇ ಸೆಮಿಸ್ಟರ್‌ಗಳ C-09 ಪಠ್ಯಕ್ರಮದಲ್ಲಿ ಸಮಾನತೆ ಇಲ್ಲದ ಪಠ್ಯ ವಿಷಯಗಳಿಗೆ 2021ರ ಅಕ್ಟೋಬರ್/ನವೆಂಬರ ಪರೀಕ್ಷೆ ಕೊನೆಯ ಅವಕಾಶವಾಗಿರುತ್ತದೆ.**

**(ಬಿ) ಉಲ್ಲೇಖ(9)ರ ಸರ್ಕಾರದ ಪತ್ರದನ್ವಯ 2009-10, 2010-11 ಮತ್ತು 2011-12ನೇ ಸಾಲಿನಲ್ಲಿ ಡಿಪ್ಲೋಮ ಕೋರ್ಸುಗಳಿಗೆ 1ನೇ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 2021ರ ಅಕ್ಟೋಬರ್/ನವೆಂಬರ ಪರೀಕ್ಷೆ ಕೊನೆಯ ಅವಕಾಶವಾಗಿರುತ್ತದೆ.**

**(ಸಿ) ಉಲ್ಲೇಖ(10)ರ ಸರ್ಕಾರದ ಪತ್ರದನ್ವಯ 2011-12, 2012-13, 2013-14 ಮತ್ತು 2014-15ನೇ ಸಾಲಿನಲ್ಲಿ ಡಿಪ್ಲೋಮ ಕೋರ್ಸುಗಳಿಗೆ ಲ್ಯಾಟರಲ್ ಎಂಟ್ರಿ ಮುಖಾಂತರ 2ನೇ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 2021ರ ಅಕ್ಟೋಬರ್/ನವೆಂಬರ ಪರೀಕ್ಷೆ ಕೊನೆಯ ಅವಕಾಶವಾಗಿರುತ್ತದೆ.**

**ಸೂಚನೆ(iv)**

**(ಎ) ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟಂತೆ ಪರೀಕ್ಷೆಯ ಎಲ್ಲಾ ರೀತಿಯ ಶುಲ್ಕಗಳನ್ನು ಖಜಾನೆ-2(K2) ಮುಖಾಂತರವೇ ಕಡ್ಡಾಯವಾಗಿ ಪಾವತಿಸತಕ್ಕದ್ದು.(0202-02-101-0-01 ಲೆಕ್ಕಶೀರ್ಷಿಕೆ)**

**(ಬಿ) ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತ್ಯೇಕವಾಗಿ ಚಲನ್‌ಗಳನ್ನು ಜನರೇಟ್ ಮಾಡಿಸಿಕೊಂಡು K2 ಮುಖಾಂತರವೇ ಪಾವತಿಸತಕ್ಕದ್ದು.**

**(ಸಿ) K2 ಚಲನ್ ಸಂಖ್ಯೆಯನ್ನು BTELinx ವೆಬ್‌ಪೋರ್ಟಲ್‌ನೊಂದಿಗೆ ಜೋಡಿಸಲಾಗುವುದು. ವಿದ್ಯಾರ್ಥಿಯ K2 ಚಲನ್ ಸಂಖ್ಯೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರವನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ.**

**(ಡಿ) K2 ಚಲನ್ ಮುಖಾಂತರ ಪರೀಕ್ಷಾ ಶುಲ್ಕಗಳನ್ನು ಪಾವತಿಸದಿದ್ದಲ್ಲಿ ಅದರಿಂದ ಮುಂದೆ ಉಂಟಾಗುವ ಬಾಧಕಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.**

**(ಈ)** **ಸರ್ಕಾರಿ ಆದೇಶ ಸಂಖ್ಯೆ: ಸಕಇ/178/ಪಕವಿ/2015, ಬೆಂಗಳೂರು, ದಿ: 31.12.2015ರಲ್ಲಿ ನಿಗಧಿಪಡಿಸಿರುವಂತೆ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಚಾಲ್ತಿಗೆ ಬರುವ ಸರ್ಕಾರಿ ಆದೇಶಗಳನುಸಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ/ಆದಾಯದ ಮಿತಿಗಳಿಗನುಗುಣವಾಗಿ ಪರೀಕ್ಷಾ ಶುಲ್ಕ ವಿನಾಯಿತಿ ನೀಡುವುದು. ಆದರೆ ಪ್ರತಿ ಪರೀಕ್ಷೆಗೆ ಅಂಕಪಟ್ಟಿ ಶುಲ್ಕ ರೂ.50/- ಮಾತ್ರ ಕಡ್ಡಾಯವಾಗಿ ಸದರಿ ವಿದ್ಯಾರ್ಥಿಗಳಿಂದ ಪಡೆಯುವಂತೆ ತಿಳಿಸಲಾಗಿದೆ.

**(ಎಫ್)** ** ಸರ್ಕಾರಿ ಆದೇಶ ಸಂಖ್ಯೆ:ಹಿಂವಇ/397/ಬಿಎಂಎಸ್/2013, ಬೆಂಗಳೂರು, ದಿನಾಂಕ: 5-9-2013 ಮತ್ತು ಹಿಂವಕ/589/ಬಿಎಂಎಸ್/2013, ದಿ:5.10.2013 & ತಿದ್ದುಪಡಿ ಹಾಗೂ ಸೇರ್ಪಡೆ ಆದೇಶ ದಿ:6.8.2014 ಗಳಲ್ಲಿ ನಿಗದಿಪಡಿಸಿರುವಂತೆ ಪ್ರವರ್ಗ-1, 2ಎ, 3ಎ, & 3ಬಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ಆದಾಯದ ಮಿತಿಗಳಿಗನುಗುಣವಾಗಿ ಪರೀಕ್ಷಾ ಶುಲ್ಕ ವಿನಾಯಿತಿ ನೀಡುವುದು. ಆದರೆ ಪ್ರತಿ ಪರೀಕ್ಷೆಗೆ ಅಂಕಪಟ್ಟಿ ಶುಲ್ಕ ರೂ.50/- ಮಾತ್ರ ಕಡ್ಡಾಯವಾಗಿ ಸದರಿ ವಿದ್ಯಾರ್ಥಿಗಳಿಂದ ಪಡೆಯುವಂತೆ ತಿಳಿಸಲಾಗಿದೆ.

{ಪು.ತಿ.ನೋ}

**(ಜಿ)**** ಸರ್ಕಾರಿ ಆದೇಶ ಸಂಖ್ಯೆ:ಎಂಡಬ್ಲ್ಯುಡಿ/21/ಎಂಡಿಎಸ್/2011, ಬೆಂಗಳೂರು, ದಿ: 2-8-2014 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯುಡಿ /400/ಎಂಡಿಎಸ್/2014, ದಿ: 17.10.2014 ರ ಪ್ರಕಾರ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಕುಟುಂಬದ ಆದಾಯವನ್ನು ನಿಗಧಿಪಡಿಸಲಾಗಿರುತ್ತದೆ ಹಾಗೂ ನಿಯಮಾನುಸಾರ ಉಲ್ಲೇಖ[2]ರ ಸರ್ಕಾರಿ ಆದೇಶದ ಪ್ರಕಾರ ಪರೀಕ್ಷಾ ಶುಲ್ಕವನ್ನು ಮತ್ತು ಪ್ರತಿ ಸೆಮಿಸ್ಟರ್ ಪರೀಕ್ಷೆಗೆ ಅಂಕಪಟ್ಟಿ ಶುಲ್ಕ ರೂ.50/- ನ್ನು ಸದರಿ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ ಪಡೆಯುವಂತೆ ತಿಳಿಸಲಾಗಿದೆ.

**(ಹೆಚ್)** ಪರೀಕ್ಷಾ ಶುಲ್ಕ ವಿನಾಯಿತಿ ನೀಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ಸಕಇ/357/ಬಿಎಂಎಸ್/2012, ಬೆಂಗಳೂರು, ದಿನಾಂಕ:7.11.2012ರ ಆದೇಶವನ್ನು ಪಾಲಿಸುವುದು.

**(ಐ)** ಎಲ್ಲಾ ವರ್ಗದ ಅನುತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ಸಪ್ಲಿಮೆಂಟರಿ ಪರೀಕ್ಷೆ ತೆಗೆದುಕೊಳ್ಳುವವರು ಪರೀಕ್ಷಾ ಶುಲ್ಕ ಮಂಜೂರಾತಿ/ಮರುಪಾವತಿಗೆ ಅರ್ಹರಲ್ಲ. ಆದ್ದರಿಂದ ನಿಯಮಾನುಸಾರ ಪರೀಕ್ಷಾ ಶುಲ್ಕ ಪಾವತಿಸತಕ್ಕದ್ದು.

ಹೆಚ್ಚಿನ ವಿವರಗಳಿಗಾಗಿ ಕಾಲಕಾಲಕ್ಕೆ ಹೊರಡಿಸಲಾದ ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಗಮನಿಸುವುದು ಮತ್ತು ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಂದ ಸ್ಪಷ್ಟನೆ ಕೋರಬಹುದಾಗಿದೆ.

(2) ಸರ್ಕಾರಿ / ಖಾಸಗಿ ಅನುದಾನಿತ / ಖಾಸಗಿ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕವನ್ನು ಕೆ2 ಮುಖಾಂತರ ಸರ್ಕಾರಿ ಖಜಾನೆಗೆ ಲೆಕ್ಕ ಶಿರ್ಷಿಕೆ: **0202-02-101-0-01** ಗೆ ಜಮಾ ಮಾಡುವ ಬಗ್ಗೆ ನಿಗಾವಹಿಸಿ ಕ್ರಮಕೈಗೊಳ್ಳುವುದು.

**ವಿಶೇಷ ಸೂಚನೆ:**

(i) ಸಂಸ್ಥೆಯ ಪ್ರಾಚಾರ್ಯರುಗಳು ಪ್ರವೇಶ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕವನ್ನು ಕೂಡ ವಸೂಲು ಮಾಡುವುದು.

(ii) ಆಗಸ್ಟ್ 2021ರ ಪರೀಕ್ಷಾ ಫಲಿತಾಂಶ ಪ್ರಕಟಗೊಂಡ ನಂತರ ವಿದ್ಯಾರ್ಥಿಗಳು ಅನುತ್ತೀರ್ಣಗೊಂಡ ವಿಷಯಗಳಿಗೆ ಕೊನೆಯ ದಿನಾಂಕದೊಳಗೆ (ದಿನಾಂಕ: 13.10.2021) ದಂಡರಹಿತವಾಗಿ ಪರೀಕ್ಷಾ ಶುಲ್ಕ ಪಾವತಿಸುವುದು.

ಫಲಿತಾಂಶ ಪ್ರಕಟಿಸಿದ ನಂತರ ತಡೆ ಹಿಡಿಯಲಾಗುವ / ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ, ಪರೀಕ್ಷೆಯಲ್ಲಿ SMP ಎಂದು ಪರಿಗಣಿಸಲಾಗಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಸೆಮಿಸ್ಟರ್ ತರಗತಿಗಳಿಗೆ ಹಾಜರಾಗಲು ಅನುಮತಿ ನೀಡಿ, ತಡೆಹಿಡಿಯಲಾದ / ಮರು ಮೌಲ್ಯಮಾಪನದ ಫಲಿತಾಂಶ ಪ್ರಕಟಗೊಂಡ ನಂತರ ಅಥವಾ ಪರೀಕ್ಷಾ SMP ಇತ್ಯರ್ಥಗೊಂಡ ನಂತರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ನಿಯಮಾನುಸಾರ ಪ್ರವೇಶ ನೀಡುವುದು ಮತ್ತು ಅಂತಹ ಪ್ರಕರಣಗಳ ಜವಾಬ್ದಾರಿಯನ್ನು ಪ್ರಾಚಾರ್ಯರೇ ವೈಯಕ್ತಿಕವಾಗಿ ಗಮನಹರಿಸುವುದು.

(iii) ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು, ವಿಭಾಗಾಧಿಕಾರಿಗಳು, ಸಂಬಂಧಪಟ್ಟ ವಿಷಯ ನಿರ್ವಾಹಕರು ತಮ್ಮ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, Candidate List ಅನ್ನು ನಿಖರವಾಗಿ ಇಂದೀಕರಿಸುವುದು. Candidate List ಅನ್ನು ಇಂದೀಕರಿಸುವುದು ಅಂತ್ಯಂತ ಪ್ರಮುಖವಾದುದು ಎಂಬುದನ್ನು ಮತ್ತೊಮ್ಮೆ ಎಲ್ಲರ ಗಮನಕ್ಕೆ ಸೂಚ್ಯವಾಗಿ ತಿಳಿಸಲಾಗಿದೆ.

ಪ್ರಯುಕ್ತ ಅಕ್ಟೋಬರ್/ನವೆಂಬರ್ 2021ರ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳ ವಿವರಗಳನ್ನು ಪರೀಕ್ಷಾ ಶುಲ್ಕ ಪಾವತಿಸಿದ ಕೂಡಲೇ ತಾವು ಈಗಾಗಲೇ ಉಪಯೋಗಿಸುತ್ತಿರುವ BTE Linx ಆನ್‌ಲೈನ್ ವೆಬ್‌ಪೋರ್ಟಲ್‌ನಲ್ಲಿ ಇರುವಂತಹ ಕ್ಯಾಂಡಿಡೇಟ್ ಲಿಸ್ಟ್‌ನಲ್ಲಿ **K2 ಮುಖಾಂತರ ಪರೀಕ್ಷಾ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆ ನಮೂದಿಸಿರುವ** ಆಧಾರದ ಮೇಲೆ Update ಮಾಡಬೇಕಾಗಿರುತ್ತದೆ. **ಪರೀಕ್ಷಾ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆ ನಮೂದಿಸಿರುವ** ಆಧಾರದ

{ಪು.ತಿ.ನೋ}

ಮೇಲೆ Update ಮಾಡಬೇಕಾಗಿರುತ್ತದೆ. ಈ ವಿವರಗಳ ಆಧಾರದಲ್ಲಿ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಸಂಸ್ಥೆಗಳಲ್ಲಿಯೇ ಮುದ್ರಿಸಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಪ್ರಾಚಾರ್ಯರುಗಳು ಹೆಚ್ಚಿನ ಮುತುವರ್ಜಿ ವಹಿಸಲು ತಿಳಿಸಲಾಗಿದೆ.

18/09/2024

ಕಾರ್ಯದರ್ಶಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

18/9/21 18/9/24

**ಇವರಿಗೆ,**

ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ - ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಆಯುಕ್ತರ ಆಪ್ತಶಾಖೆ – ಅವಗಾಹನೆಗಾಗಿ,
2. ನಿರ್ದೇಶಕರ ಆಪ್ತಶಾಖೆ – ಅವಗಾಹನೆಗಾಗಿ,
3. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
4. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
5. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ರಿಜಿಸ್ಟ್ರಾರ್ (ಪರೀಕ್ಷೆ)
7. ಕಾರ್ಯದರ್ಶಿಗಳ ಆಪ್ತಶಾಖೆ.
8. ಉಪ ನಿರ್ದೇಶಕರು (ಪರೀಕ್ಷೆ)
9. ಅಧೀಕ್ಷಕರು (ಆರ್.ಡಿ.ಎಂ. (1) ರಿಂದ (15)
10. ಗಣಕ ಕೇಂದ್ರ-ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು.
11. ಕಛೇರಿ ಪ್ರತಿ.

ಡಿ.ಇ.ಪ್ರ.